**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಾರ್ಡ್–103, ಕಾವೇರಿಪುರ**

**ವಾರ್ಡ್ ಸಮಿತಿ ಸಭೆಯ ನಡವಳಿಗಳು**

ದಿನಾಂಕ: 02.01.2021

1. ಸ್ವಾಗತ ಭಾಷಣ
2. ಶ್ರೀ ಅಲೋಕ್ ಶೆಟ್ಟಿ ವಾರ್ಡ್ ನೋಡಲ್ ಅಧಿಕಾರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮಾತನಾಡಿ ವಾರ್ಡ್ 103, ಕಾವೇರಿಪುರ ಪ್ರದೇಶದಲ್ಲಿ ನಾಗರಿಕರುಗಳಿಗೆ ಯಾವುದೇ ಸಮಸ್ಯೆ ಆಗದಂತೆ ಕೆಲಸ ಮಾಡಲು ವಾರ್ಡ್ ಸಮಿತಿ ಸದಸ್ಯರುಗಳಿಗೆ ಉತ್ಸಾಹ ತುಂಬಿದರು. ಹಾಗೂ ಪ್ರಮಾಣಿಕವಾಗಿ ಕೆಲಸ ಮಾಡಲು ತಿಳಿಸಿದರು.
3. ರಂಗನಾಥಪುರ 6ನೇ ಮುಖ್ಯರಸ್ತೆಯಲ್ಲಿರುವ ಅನಾಧಿಕೃತ ಶೆಡ್‌ಗಳನ್ನು ನಿರ್ಮಿಸಿದ್ದು ಅದನ್ನು ಜೆ.ಸಿ.ಬಿ ಯಿಂದ ತೆಗೆದು ಸಮತಟ್ಟು ಮಾಡುಲು ಪತ್ರದ ಮುಖೇನ ಪೋಲೀಸ್ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದು.
4. ಕಾವೇರಿಪುರ 3ನೇ ಮುಖ್ಯರಸ್ತೆ ಅಲದ ಮರದ ಹತ್ತಿರ ಪೋಲಿ ಹುಡುಗರು ಗಾಂಜಾ ಹೋಡಿದು ಹೋಗಿ ಬರುವ ಹೆಣ್ಣು ಮಕ್ಕಳಿಗೆ ಚುಡಾಯಿಸಿ ತೊಂದರೆ ನೀಡುತ್ತಿರುವುದಾಗಿ ತಿಳಿಸಿದ್ದು ಸಂಬಂಧ ಪಟ್ಟ ಪೊಲೀಸ್ ಇಲಾಖೆಯವರು ಆಸ್ಥಳದಲ್ಲಿ ಹೊಯ್ಸಳ ನೇಮಕಾ ಮಾಡಲಾಗುವುದೆಂದು ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
5. 60ಅಡಿರಸ್ತೆ ಪಟ್ಟೇಗಾರಪಾಳ್ಯ ರಸ್ತೆಯಲ್ಲಿರುವ ಅನಾಧೀಕೃತವಾಗಿ ನಿಂತಿರುವ ವಾಹನವನ್ನು ತೆರವುಗೊಳಿಸುವುದು.
6. ಕನಕನಗರ ಮುನಿಕೃಷ್ಣಪ್ಪ ಬಡಾವಣೆಯಲ್ಲಿ BWSSB ಯಿಂದ ಕಾಮಗಾರಿ ಕೆಲಸ ಮುಗಿದಿದ್ದು ರಸ್ತೆಯನ್ನು ಸರಿಪಡಿಸುವುದು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.
7. ಕನಕನಗರ ನವರತ್ನ ಬಾರ್ ರಸ್ತೆಗೆ ಡಾಂಬಾರ್ ಮಾಡಬೇಕೆಂದು ಸಭೆಯಲ್ಲಿ ತಿಳಿಸಿದರು.
8. ಟೆಂಡರ್ ಅಗಿರುವ 5ಸಾವಿರದ ಕಸದ ಡಬ್ಬಿಗಳನ್ನು ಮನೆ ಮನೆಗೆ ಹಂಚಿಕೆ ಮಾಡುವುದು ಎಂದು ಟೆಂಡರ್ ಅಗಿರುವವರಿಗೆ ತಿಳಿಸಿದರು.
9. ಮಾಗಡಿ ಮುಖ್ಯರಸ್ತೆ ಹೆಚ್.ವಿ.ಆರ್ ಬಡಾವಣೆಯಿಂದ ಸುಮನಹಳ್ಳಿ ಸೇತುವೆ ವರೆಗೂ ಬಿ.ಡಬ್ಲ್ಯೂಎಸ್.ಎಸ್.ಬಿ ಯೋಜನೆಯವರು ರಸ್ತೆ ಕಾಮಗಾರಿ ಸಮಯದಲ್ಲಿ ತೆಗೆದಿರುವ ಮಣ್ಣಿನ ರಾಶಿಯನ್ನು ರಸ್ತೆಯಲ್ಲಿ ಬಿಟ್ಟಿರುವುದು ಕೂಡಲೆ ತೆಗೆಯಲು ಸಂಬಂಧಪಟ್ಟಿ ಅಧಿಕಾರಿಗಳಿಗೆ ತಿಳಿಸಿದರು ಸಹಾ ಅದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಹಾಗೂ ಆರಸ್ತೆಯಲ್ಲಿ ಸಾರ್ವಜನಿಕರಿಗೆ ವಾಹನ ಚಲಿಸಲು ತೊಂದರೆ ಆಗುತ್ತಿರುವುದರಿಂದ ರಸ್ತೆಗೆ ಡಾಂಬರ್ ಹಾಕಲು ಸಂಬಂಧಪಟ್ಟಿ ಆಧಿಕಾರಿಗಳಿಗೆ ಪತ್ರದ ಮುಖಾಂತರ ತಿಳಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು.

Scanned with CamScanner

10. ಬೀದಿ ದೀಪಗಳನ್ನು ಪ್ರಜ್ವಲಿಸಲು ಸರಿಯಾದ ಸಮಯಕ್ಕೆ ಸ್ವಿಚ್ ಆಫ್ ಮತ್ತು ಸ್ವಿಚ್ ಆನ್ ಆಗುವುದಿಲ್ಲ, ಅದಕ್ಕೆ ಸೂಕ್ತ ಸಲಕರಣೆಗಳು ಅಳವಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.
11. ಆರೋಗ್ಯ ವೈದ್ಯಾಧಿಕಾರಿಗಳು ಈಗಾಗಲೆ ನೀಗಡಿಪಟಿಸಿರುವ ಬ್ಲಾಕ್ 21 ಮತ್ತು 22ರಲ್ಲಿ ಖಾಲಿ ನಿವೇಶನವಾಗಿರುತ್ತದೆ. ಹಾಗೂ ಈ ಜಾಗದಲ್ಲಿ ಜನರು ವಾಸಿಸುತ್ತಿರುವುದಿಲ್ಲ. ಆದ್ದರಿಂದ ಈ ಜಾಗದಲ್ಲಿರುವ 2 ವಾಹನಗಳನ್ನು ನೇಮಕ ಮಾಡಲಾಗಿರುತ್ತದೆ. ಖಾಲಿ ನಿವೇಶನವಾಗಿರುವುದರಿಂದ ಈ 2 ವಾಹನಗಳನ್ನು ಬೇರೆ ಸ್ಥಳಗಳಿಗೆ ಬದಲಾಯಿಸಲು ತಿಳಿಸಿದರು. ಹಾಗೂ ಈ ಬ್ಲಾಕ್ ವಿಂಗಡನೆಯೂ ಸರಿಯಾಗಿ ಇರುವುದಿಲ್ಲ. ಆದ್ದರಿಂದ ಪರಿಶೀಲಿಸಿ ಸರಿಯಾಗಿ ಬ್ಲಾಕ್ ಮಾಡುವುದು.

02/01/20

ಶ್ರೀ ರೇಣುಕಾಪ್ರಸಾದ್. ಸಿ
ಕಾರ್ಯದರ್ಶಿ

(ಶ್ರೀ ಆಲೋಕ್ ಶೆಟ್ಟಿ)
ವಾರ್ಡ್ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner